(ಶ್ರೀ ಡಿ. ಕೆ. ನಾಯಕರ್)

ಬಂದು ಇನ್‌ವೆಸ್ಟಿಗೇಷನ ಮಾಡಿದ ನಂತರ ಯಾವ ರೀತಿ ಈ ಬಾಬನಲ್ಲಿ ಬಡವರಿಗೆ ಪರಿಹಾರ ಕೊಡಬೇಕೆಂದು ಯೋಚನೆ ಮಾಡಲಾಗಿದೆಯೆಂದು ನಾನು ಹೇಳಬಲ್ಲೆ.

ಇನ್ನು ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಮಾತೃಭಾಷೆಯಲ್ಲಿಯೇ ನ್ಯಾಯಾಲಯಗಳಲ್ಲಿ ನಡೆವಳಿಕೆಗಳು ನಡೆಯಬೇಕೆಂದು ತಮ್ಮ ಮಾತಿನಲ್ಲಿ ಹೇಳಿದ್ದಾರೆ. ರಾಜ್ಯಾಂಗದ ಪ್ರಕಾರ ಅಂದರೆ, ಕಾನ್‌ಸ್ಟಿಟ್ಯೂಷನ್ನಿನಲ್ಲಿ ಹೇಳಿರುವ ಪ್ರಕಾರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿ ಯಾವ ಭಾಷೆಯಲ್ಲಿ ನಡವಳಿಕೆಗಳು ಇರಬೇಕೆಂದು ನಿರ್ದಿಷ್ಟಪಡಿಸಲಾಗಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಬಿಟ್ಟು ಉಳಿದ ಸಬಾರ್ಡಿನೇಟ್ ಕೋರ್ಟುಗಳಲ್ಲಿ ಯಾವ ಲ್ಯಾಂಗ್ವೇಜ್ ಇರಬೇಕೆಂಬ ಬಗ್ಗೆ ಸರ್ಕಾರ ಬದರಾಯಿಸುವ ಅವಕಾಶವಿದೆ. ಈ ಮೊದಲೇ ಹಿಂದಿನ ಸಭೆಯಲ್ಲಿ ಸರ್ಕಾರ ಈ ಬಗ್ಗೆ ಸೂಕ್ತವಾಗಿ ಕ್ರಮ ತೆಗೆದುಕೊಂಡಿದ್ದಾರೆ. ಇಂದು ಮಾನ್ಯ ಶ್ರೀ ಆರ್ಮುಗಂ ಅವರು ಸುಪ್ರೀಂ ಕೋರ್ಟಿನಲ್ಲಿ ಅದಂಥ ನಿರ್ಣಯವನ್ನು ಇಲ್ಲಿ ಹೇಳಿದ್ದಾರೆ. ಅದನ್ನು ಸಕಾಲದಲ್ಲಿ ಇಂಪ್ಲಿಮೆಂಟ್ ಮಾಡದೇ ಇರುವುದರಿಂದ, ಈ ಸರ್ಕಾರದಿಂದ ಸುಪ್ರೀಂ ಕೋರ್ಟ್ ಕಂಟೆಂಪ್ಟ್ ಬಗ್ಗೆ ಕ್ಷಮಾಪಣೆ ಕೇಳಲಾಗಿದೆ. ಆದ್ದರಿಂದ ಈ ಅಮೆಂಡ್‌ಮೆಂಟ್ ಮೇಲೆ ಮಾತನಾಡುವಾಗ ಆ ವಿಷಯ ಹೇಳುವುದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಆ ರೀತಿಯಲ್ಲಿ ಮಾತನಾಡುವಾಗ ಯಾವ ಸಂದರ್ಭದಲ್ಲಿ ಈ ತಿದ್ದುಪಡಿಯನ್ನು ತಂದಿದೆ. ಎತ್ತುವುದನ್ನು ಮಾನ್ಯ ಸದಸ್ಯರು ಲಕ್ಷ್ಯಕ್ಕೆ ತೆಗೆದುಕೊಂಡಿದ್ದರೆ ಇಂತಹ ಕಾಮೆಂಟ್ಸ್ ಮಾಡುತ್ತಿರಲಿಲ್ಲವೆಂದು ನಾನು ನಂಬಿದ್ದೇನೆ

ಇಷ್ಟು ಮಾತ್ರ ಹೇಳಿ ಎಲ್ಲಾ ಸದಸ್ಯರು ಸಂವಿಧಾನದ 31 ನೇ ತಿದ್ದುಪಡಿಯ ವಿಧೇಯಕದ ಬಗ್ಗೆ ಅನುಮತಿಯನ್ನು ಕೊಟ್ಟಿರುವುದರಿಂದ, ಅದನ್ನು ರ್ಯಾಟಿಫೈ ಮಾಡುವುದಕ್ಕೆ ಈ ಸಭೆಯನ್ನು ಕೋರುತ್ತೇನೆ.

MADAM SPEAKER.—I will put the motion to the vote of the House. The question is :

"That this House ratifies the amendments to the Constitution of India falling within the purview of the provisio to clause (2) of article 368 thereof, proposed to be made by the Constitution (Thirtieth Amendment) Bill, 1972, as passed by the two Houses of Parliament."

The Motion was adopted unanimously.

THE MYSORE HOMOEOPATHIC PRACTITIONERS (AMENDMENT) BILL, 1272.

Motion to consider

Sri H. SIDDAVEERAPPA (Minister for health).—Mr. Speaker, I beg to move

"That the Mysore Homoeopathic Practitioners (Amendment) Bill, 1972, be taken into consideration."

MADAM SPAEKER.—Motion moved:

'That the Mysore Homoeopathic Practitioners (Amendment) Bill, 1972, be taken into consideration."

[MR. DEPUTY SPEAKER in the Chair]

(MR. DEPUTY SPEAKER in the Chair).

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಇದು ಒಂದು ಚಿಕ್ಕ ಮಸೂದೆ. ಇದರಲ್ಲಿ ಅಂತಹ ಮಹತ್ವದಾದ ತತ್ವಗಳು ಏನೂ ಅಡಕವಾಗಿಲ್ಲ. ಇದರಲ್ಲಿ ಕೆಲವು ಪ್ರೊಸೀಜರ್ ಅಮೆಂಡ್‌ಮೆಂಟ್‌ಗಳು ಆಗಬೇಕಾಗಿವೆ. ಅಂದರೆ ಜುನಾವಣೆ ಆಗಬೇಕಾದರೆ, ರಾಜ್ಯದಲ್ಲಿರತಕ್ಕಂತಹ ಎರ್ನಾಡಾಕ್ಟರುಗಳು ಒಂದು ಕಡೆ ಬಂದು ಓಟು ಹಾಕಬೇಕಾಗುತ್ತದೆ. ರಾಜ್ಯದಲ್ಲಿ ಸುಮಾರು 1736 ಹೋಮಿಯೋಪತಿ ಡಾಕ್ಟರುಗಳು ಇದ್ದಾರೆ. ಇವರೆಲ್ಲಾ ಒಂದು ಕಡೆ ಬಂದು ಓಟು ಕೊಡಬೇಕೆಂದರೆ ಬಹಳ ಕಷ್ಟ. ಆದ್ದರಿಂದ ಬೇರೆ ಯುನಿವರ್ಸಿಟಿ ಸೆನೇಟ್ ಮುತ್ತಿತರ ಸಂಸ್ಥೆಗಳಲ್ಲಿ ಪ್ರೋನ್ಸಲ್ ಬ್ಯಾಲೆಟ್ ಕಳಿಸುವಂತೆ ಇವರಿಗೂ ಅವಕಾಶ ಮಾಡಿಕೊಟ್ಟರೆ ಅನುಕೂಲ ಮತ್ತು ಎಲ್ಲರೂ ಪ್ರೋಸ್ಸಿನಲ್ಲಿ ತಮ್ಮ ಮತವನ್ನು ಚಲಾಯಿಸುವುದಕ್ಕೆ ಒಂದು ಅವಕಾಶವಾಗುತ್ತದೆಂದು ಇದರಲ್ಲಿ ತಿಳಿದುಕೊಂಡು ಬಂದಿದ್ದೇವೆ. ಇದನ್ನು ಸರ್ವರೂ ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† ಟಿ. ಆರ್. ಶಾಮಣ್ಣ.—ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಈ ಒಂದು ಅಮೆಂಡ್‌ಮೆಂಟನ್ನು ತೆಗೆದುಕೊಂಡು ಬಂದಿದ್ದಾರೆ. ಇದರ ಬಗ್ಗೆ ಯಾರದೂ ವಿರೋಧವಿಲ್ಲವೆಂದು ಸ್ಪಷ್ಟ ಪಡಿಸಬೇಕಾಗಿದೆ. ಆದರೆ ಪ್ರೋನ್ಸಲ್ ಬ್ಯಾಲೆಟುಗಳಲ್ಲಿರುವಂತಹ ಕೆಲವು ನ್ಯೂನತೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟ ರೂಲ್ಸ್‌ನ್ನು ಕ್ರೋಢೀಕರಿಸುವಾಗ ಅದನ್ನು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ಈ ಪ್ರೋನ್ಸಲ್ ಬ್ಯಾಲೆಟ್ ಇದ್ದರೂ, ಹಣ ಯಾರು ಹೆಚ್ಚು ಖರ್ಚು ಮಾಡುತ್ತಾರೆ, ಅಂಥವರು ಕಾರು ಹಿಡಿದು ಕೊಂಡು ಕ್ಯಾನವಾಸ್ ಮಾಡಿ ಆ ಓಟುಗಳನ್ನು ಕರೆಕ್ಟ್ ಮಾಡಿಕೊಂಡು ಬಂದು ಕೊನೆಗೆ ಬಾಕ್ಸಿನಲ್ಲಿ ಹಾಕತಕ್ಕ ಪದ್ಧತಿಯನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಇನ್‌ಫ್ಲುಯೆನ್ಸ್ ಮಾಡುವ, ಒತ್ತಡ ಉಪಯೋಗಿಸಿಕೊಂಡು ಈ ರೀತಿ ಮಾಡುವುದನ್ನು ತಪ್ಪಿಸುವುದಕ್ಕೆ ತಾವು ದಯವಿಟ್ಟು ಏನಾದರೂ ಒಂದು ಆಲೋಚನೆಯನ್ನು ಮಾಡಬೇಕು. ಅಲ್ಲದೆ ಈ ಪ್ರೋನ್ಸಲ್ ಬ್ಯಾಲೆಟನ್ನು ಅನೇಕ ಜನರು ಉಪಯೋಗಿಸುವುದಿಲ್ಲ. ಅದಕ್ಕೆ ಸ್ಟ್ಯಾಂಪ್ ಕವರ್ ಇತ್ಯಾದಿಗಳನ್ನು ಒದಗಿಸಿದರೆ ಇನ್ನೂ ಅನುಕೂಲವೆಂದು ನಲಿ ಮಾಡುತ್ತೇನೆ. ಆದ್ದರಿಂದ ಈ ಪ್ರೋನ್ಸಲ್ ಬ್ಯಾಲೆಟ್ ಪದ್ಧತಿಯಲ್ಲಿ ಇರತಕ್ಕಂತಹ ನ್ಯೂನತೆಗಳನ್ನು ಹೋಗಡಾಡಿನಲು ಬೇಕಾದಂತಹ ಕಾರ್ಯಕ್ರಮಗಳನತಿ ಸೂಕ್ತವಾದ ತಿದ್ದುಪಡಿಗಳನ್ನು ಮಾಡಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅದೇ ರೀತಿ ಎಲ್ಲರೂ ಒಂದೇ ಕಡೆ ಬರುವ ಹಾಗೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಏಕೆಂದರೆ ಎಲ್ಲೆ ಹೆಚ್ಚು ಜನರು ಇರುತ್ತಾರೋ, ಅಲ್ಲಿ ತಮ್ಮವರೇ ಇರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಷ್ಟು ಸಲಹೆಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀಮಾನ್ ಶಾಮಣ್ಣನವರು ಸಾಮಾನ್ಯವಾಗಿ ಪ್ರೋನ್ಸಲ್ ಬ್ಯಾಲೆಟ್‌ನಲ್ಲಿರತಕ್ಕಂತಹ ನ್ಯೂನತೆಗಳನ್ನು ಹೇಳುತ್ತಿದ್ದಾರೆ. ನಾನಾದರೂ ತಿಳಿಯುತ್ತೇನೆ—ಇವರೆಲ್ಲರೂ ವಿದ್ಯಾವಂತರಾಗಿರುವುದರಿಂದ ಅಂಥವರ ಬಲೆಗೆ ಬೀಳದೇ, ಅವರವರ ರಕ್ಷಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ದುಡ್ಡಿನ ಪ್ರಭಾವಕ್ಕೆ ಒಳಗಾದರೆ ಬಹಳ ಕಷ್ಟವಾಗುತ್ತದೆ. ಎಲ್ಲಿಯವರೆಗೆ ಪ್ರಜಾಪ್ರಭುತ್ವದಲ್ಲಿ ಇಲೆಕ್ಟರ್ಸ್ ಬುದ್ಧಿವಂತರಾಗುವುದಿಲ್ಲವೋ ಅಲ್ಲಿಯವರೆಗೆ ಈ ಜನರ ಕೈವಾಡ ಇಲ್ಲದಿರುವುದಿಲ್ಲ. ಮತ್ತೆ ಅವರು ರೂಲ್ಸ್‌ನಲ್ಲಿ ಏನಾದರೂ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತಾರೆ. ಅದರ ಬಗ್ಗೆ ಹೆಚ್ಚು ನಾನು ಹೇಳಲಾರೆ. ಆದ್ದರಿಂದ ಇದರಲ್ಲಿ ಹೆಚ್ಚಿನ ತತ್ವ ಅಡಕವಾಗಿಲ್ಲ. ತಾವೆಲ್ಲರೂ ಇದಕ್ಕೆ ಅನುಮತಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—The question is:

"That the Mysore Homoeopathic Practitioners (Amendment) Bill 1972, be taken into consideration."

The motion was adopted.

CLAUSES 2 *to* 4.

Mr. DEPUTY SPEAKER.—The question is:

"That Clauses 2 to 4 both inclusive, do stand part of the Bill."

The motion was adopted.

Clauses 2 to 4, both inclusive, were added to the Bill.

CLAUSE 1, ETC.

Mr. DEPUTY SPEAKER.—The question is

"That Clause 1, the long Title, the preamble and the Enacting Formula do stand part of the Bill."

The motion was adopted.

Clause 1, the long Title, the preamble and the Enacting Formula were added to the Bill.

Motion to pass.

Sri H. SIDDAVEERAPPA.—Mr. Speaker, I move:

"That the Mysore Homoeopathic Practitioners (Amendment) Bill, 1972, be passed."

Mr. DEPUTY SPEAKER.—The suestion is:

"That the Mysore Homoeopathic Practitioners (Amendment) Bill, 1972, be passed."

The motion was adopted and the Bill was passed.

3.30 P.M.

MYSORE AYURVEDIC AND UNANI PRACTITIONERS REGISTRATION AND MEDICAL PRACTITIONERS' MISCELLANEOUS (AMENDMENT) BILL, 1972.

Sri H. SIDDAVEERAPPA (Minister for Health).—Sir, I move:

"That the Mysore Ayurvedic and Unani Practitioners Registration and Medical Practitioners' Miscellaneous (Amendment) Bill, 1972, be taken into consideration."

Mr. DEPUTY SPEAKER.—Motion moved:

"That the Mysore Ayurvedic and Unani Practitioners Registration and Medical Practitioners' Miscellaneous (Amendment) Bill, 1972, be taken into consideration."